# ಪರಿವಾರ ಪ್ರೀತಿ

ಪಾಂಡವರಿಗೂ ಕೌರವರಿಗೂ ಯುದ್ಧ ನಡೆದು ಕೊನೆಗೊಂಡಿತ್ತು. ಯುಧಿಷ್ಠಿರ ಪಟ್ಟಾಭಿಷಿಕ್ತನಾಗಿ ಹಲವು ವರ್ಷ ಕಳೆದಿತ್ತು. ಧೃತರಾಷ್ಟ್ರ, ಗಾಂಧಾರಿ, ವಿದುರ ಮತ್ತು ಕುಂತಿ, ಭಾಗೀರಥಿ ನದಿಯ ತೀರದ ಅರಣ್ಯದಲ್ಲಿ ಆಶ್ರಮ ಕಟ್ಟಿಕೊಂಡು ವಾನಪ್ರಸ್ಥರಾಗಿದ್ದರು. ಯುಧಿಷ್ಠಿರಾದಿಗಳಿಗೆ ತಾಯಿ ಕುಂತಿಯ ನೆನಪು ಒಸರಿಕೊಂಡು ಬಂದಿತು. ಸಹದೇವ ಮೊದಲಾದವರಿಗೂ ತಾಯಿ ಕುಂತಿ ಮತ್ತು ಧೃತರಾಷ್ಟ್ರ–ಗಾಂಧಾರಿಯರನ್ನು ನೋಡುವ ಹಂಬಲ ತುಂಬಿ ಬಂದಿತು. ಅರಮನೆಯಲ್ಲಿದ್ದ ಗಂಡರನ್ನು ಕಳೆದುಕೊಂಡ ಹತ್ತಾರು ವಿಧವೆಯರಿದ್ದರು. ಒಂದು ದಿನ ಯುಧಿಷ್ಠಿರ ಅವರನ್ನೆಲ್ಲಾ ಕರೆದುಕೊಂಡು ಧೃತರಾಷ್ಟ್ರ–ಗಾಂಧಾರಿ, ಕುಂತಿ, ವಿದುರ, ಸಂಜಯರನ್ನು ಕಾಣಲು ಅರಣ್ಯಕ್ಕೆ ಹೊರಟನು. ಇವರು ಹೊರಟಾಗ ನೂರಾರು ಪ್ರಜೆಗಳು ಅವರ ಜೊತೆ ಹೊರಟರು. ಇವರೆಲ್ಲಾ ಯಮುನಾನದಿಯನ್ನು ದಾಟಿದರು. ದೂರದಲ್ಲಿ ಆಶ್ರಮ ಅವರಿಗೆ ಕಂಡಿತು. ಪಾಂಡವರು ರಥದಿಂದ ಕೆಳಕ್ಕಿಳಿದರು. ಕಾಲ್ನಡಿಗೆಯಲ್ಲಿ ಧೃತರಾಷ್ಟ್ರನ ಕುಟೀರಕ್ಕೆ ಹೋದರು. ಅಲ್ಲಿದ್ದ ಆಶ್ರಮವಾಸಿಗಳೂ ಸನ್ಯಾಸಿಗಳೂ ಸ್ವಾಗತಿಸಿದರು. ಸಹದೇವ ದೂರದಲ್ಲಿ ಕುಂತಿಯನ್ನು ಕಂಡವನೇ ಹೋಗಿ ತಾಯಿಯನ್ನು ಅಪ್ಪಿಕೊಂಡ. ಕುಂತಿಯು ಅವನ ನೆತ್ತಿಯನ್ನು ಆಘ್ರಾಣಿಸಿದಳು. ಯುಧಿಷ್ಠಿರ ಮೊದಲಾದವರು ಕುಂತಿಗೆ ಪಾದಮುಟ್ಟಿ ನಮಸ್ಕರಿಸಿದರು. ಧೃತರಾಷ್ಟ್ರ ಮತ್ತು ಗಾಂಧಾರಿಯರಿಗೆ ಎಲ್ಲರೂ ನಮಸ್ಕರಿಸಿದರು. ಅವರಿಗೆ ಅಪರಿಮಿತ ಸಂತೋಷ ಉಂಟಾಯಿತು. ಗಾಂಧಾರಿ, ಧೃತರಾಷ್ಟ್ರ ಇಬ್ಬರೂ ಭಾವಪರವಶರಾದರು. ಅವರ ಕಂಗಳಲ್ಲಿ ಆನಂದಾಶ್ರು ತುಂಬಿಕೊಂಡಿತು. ಎಲ್ಲರೂ ಪರಸ್ಪರ ತಮ್ಮತಮ್ಮ ನೆನಪುಗಳನ್ನು ಹಂಚಿಕೊಂಡರು.

ಯುಧಿಷ್ಠಿರ, ದ್ರೌಪದಿ–ಸುಭದ್ರೆಯರೊಡನೆಯೂ ಸೋದರರ ಜತೆಗೂ ಕುಳಿತುಕೊಂಡ. ಅರಣ್ಯದ ತಪಸ್ವಿಗಳೂ ಸನ್ಯಾಸಿಗಳೂ ಅವರನ್ನು ಸುತ್ತುಕೊಂಡರು. ಅಲ್ಲಿದ್ದ ಸಂಜಯ ಆಶ್ರಮದವರಿಗೆ ಎಲ್ಲರ ಪರಿಚಯವನ್ನು ಮಾಡಿಕೊಟ್ಟ. ಧೃತರಾಷ್ಟ್ರರನ್ನೂ ವಿಚಾರಿಸಿಕೊಂಡು ಸಮಾಧಾನಚಿತ್ತನಾದ. ಇತ್ತ ಯುಧಿಷ್ಠಿರ ಎಲ್ಲರ ಪ್ರಶ್ನೆಗಳಿಗೆ ಉತ್ತರನೀಡಿ ಪ್ರತಿಯೊಬ್ಬರ ಯೋಗಕ್ಷೇಮವನ್ನೂ ವಿಚಾರಿಸಿಕೊಂಡ. ಅವನಿಗೆ ವಿದುರನ ನೆನಪು ಬಂದಿತು. ವಿದುರನು ಆಹಾರ ತ್ಯಜಿಸಿ, ನಿರಾಹಾರವಾಗಿರುವುದನ್ನು ಯುಧಿಷ್ಠಿರನಿಗೆ ಧೃತರಾಷ್ಟ್ರ ತಿಳಿಸಿದ. ವಿದುರ ಹಲವು ವ್ರತ, ತಪಸ್ಸುಗಳ ಆಚರಣೆಯನ್ನು ಮಾಡುತ್ತ ಏಕಾಂಗಿಯಾಗಿರುವುದು ಧರ್ಮರಾಯನಿಗೆ ತಿಳಿಯಿತು. ಧೃತರಾಷ್ಟ್ರನ ಜತೆ ಮಾತನಾಡುತ್ತಿರುವಾಗಲೇ ವಿದುರ ದೂರದಲ್ಲಿ ಕಾಣಿಸಿಕೊಂಡ. ಅವನು ಜಟಾಧಾರಿಯಾಗಿದ್ದು ಕೃಶನಾಗಿದ್ದ. ಯುಧಿಷ್ಠಿರ ಎದ್ದು ಅವನ ಬಳಿಹೋದ. ಆದರೆ, ವಿದುರ ಅರಣ್ಯದೊಳಕ್ಕೆ ಓಡಿಹೋಗಿ, ನಿರ್ಜನಸ್ಥಳದಲ್ಲಿ ಮರವೊಂದಕ್ಕೆ ಒರಗಿ ನಿಂತುಕೊಂಡ. ವಿದುರನು ಚಲಿಸದೆ ನಿಂತುಕೊಂಡು ಧರ್ಮರಾಯನನ್ನು ದಿಟ್ಟಿಸಿನೋಡಿದ. ವಿದುರನು ಯೋಗಶಕ್ತಿಯಿಂದ ಯುಧಿಷ್ಠಿರನ ದೇಹವನ್ನು ಪ್ರವೇಶಿಸಿ ಲೀನನಾದ. ಧರ್ಮರಾಯನಿಗೆ ಅದರ ಅನುಭವ ಉಂಟಾಯಿತು. ಧರ್ಮರಾಯ ಆಶ್ರಮಕ್ಕೆ ಹಿಂದಿರುಗಿ ತನ್ನ ಅನುಭವವನ್ನು ಹಂಚಿಕೊಂಡ. ಅಲ್ಲಿದ್ದ ಎಲ್ಲರೂ ವಿಸ್ಮಯಗೊಂಡರು.

ಹಸ್ತಿನಾವತಿಯಿಂದ ಬಂದಿದ್ದ ಪ್ರತಿಯೊಬ್ಬರೂ ಸಂಭ್ರಮೋಲ್ಲಾಸಗಳಿಂದ ತಣಿದರು. ಆ ರಾತ್ರಿಯನ್ನು ಅಲ್ಲಿ ಕಳೆದರು. ಪಾಂಡವರು ಆಶ್ರಮದ ಆಹಾರವನ್ನು ತೆಗೆದುಕೊಂಡು ತಾಯಿ ಕುಂತಿಯ ಪಕ್ಕದಲ್ಲಿ ನೆಲದ ಮೇಲೆ ಮಲಗಿಕೊಂಡರು. ಮರುದಿನ ಬೆಳಿಗ್ಗೆ ಅರಣ್ಯದೊಳಗೆ ಸುತ್ತುಹಾಕಿದರು. ಅಲ್ಲಿದ್ದ ಹಲವು ಆಶ್ರಮಗಳಿಗೆ ಭೇಟಿಕೊಟ್ಟರು. ಋಷಿಗಳು ಅಗ್ನಿಕುಂಡದ ಮುಂದೆ ಕುಳಿತು ಆಜ್ಯವನ್ನು ಅರ್ಪಿಸಿ ಹೋಮಹವನಗಳನ್ನು ಮಾಡುತ್ತಿದ್ದರು. ಧರ್ಮರಾಯನು ಪ್ರತಿಯೊಬ್ಬರ ಬಳಿ ತೆರಳಿ ಸೂಕ್ತವಾದ ದಾನಗಳನ್ನು ನೀಡಿದ. ಧರ್ಮರಾಯನು ನೀಡಿದ ಉಡುಗೊರೆಗಳಿಂದ ಆಶ್ರಮವಾಸಿಗಳು ಬಲು ಸಂತೋಷಪಟ್ಟರು. ಅರಣ್ಯದಲ್ಲಿ ಜಿಂಕೆ, ಸಾರಂಗ ಸಮೂಹಗಳಿದ್ದವು. ಅರಮನೆಯಿಂದ ಬಂದಿದ್ದವರು ಅವುಗಳನ್ನು ಪ್ರೀತಿಯಿಂದ ಕಂಡರು. ಗೋಸಮೂಹವು ಅಪರಿಚಿತರಾದ ಜನರನ್ನು ಕಂಡು ಬೆದರಿದವು. ಜಿಂಕೆಗಳು ಬೆರಗು ಕಣ್ಣುಗಳಿಂದ ನೋಡಿದವು. ಸಮೀಪದಲ್ಲಿಯೇ ಭಾಗೀರಥಿ ನದಿಯು ಹರಿಯುತ್ತಿತ್ತು. ಬೆಳಗಿನ ಅರಣ್ಯ ಸೌಂದರ್ಯದಲ್ಲಿ ಪ್ರತಿಯೊಬ್ಬರೂ ವಿಶ್ರಾಂತರಾದರು. ತಮ್ಮ ತಮ್ಮ ಹಳೆಯ ನೆನಪುಗಳನ್ನು ಹೇಳಿಕೊಳ್ಳುತ್ತ, ದಿನಗಳನ್ನು ಕಳೆದರು. ಕುಂತಿ, ಗಾಂಧಾರಿಯರು ವಿಧವೆಯರಾದ ಸ್ತ್ರೀಸಮೂಹವನ್ನು ಕಂಡು ಮಮ್ಮಲ ಮರುಗಿದರು. ಹದಿನೆಂಟು ದಿನಗಳ ಯುದ್ಧದ ದುಷ್ಪರಿಣಾಮವನ್ನು ನೆನೆದು ಅವರು ಅಲವತ್ತುಕೊಂಡರು.

ಮಹಾಭಾರತದ ಒಂದು ಅಪೂರ್ವ ಸಂದರ್ಭವನ್ನು ವ್ಯಾಸರು ಇಲ್ಲಿ ನಮ್ಮ ಕಣ್ಣಮುಂದೆ ತಂದಿರಿಸಿದ್ದಾರೆ. ಪಾಂಡವ ಸಮೂಹಕ್ಕೂ ಕೌರವ ಸಮೂಹಕ್ಕೂ ಬದ್ಧದ್ವೇಷ ಇತ್ತೆಂಬುದೇನೋ ನಿಜ. ಆದರೆ, ಇದರ ಹಿಂದೆ ಪ್ರೇಮದ ಕೌಟುಂಬಿಕ ತಂತುಗಳು ಇದ್ದುದನ್ನು ನಾವು ಮರೆಯುವಂತಿಲ್ಲ. ದ್ವೇಷ ಅಲ್ಪಕಾಲದ್ದೇ ಹೊರತು; ಅದು ದೀರ್ಘಕಾಲ ನಮ್ಮೊಡನೆ ಬರುವುದಿಲ್ಲ. ಧರ್ಮರಾಯ ದ್ವೇಷವನ್ನು ಸಾಧಿಸಿದವನಲ್ಲ. ಅವನು ಧರ್ಮರಾಯನೇ ಸರಿ! ಕಳೆದ ಐವತ್ತು ವರ್ಷಗಳ ಹಿಂದೆ ನಮ್ಮ ನಮ್ಮ ಗ್ರಾಮಗಳಲ್ಲಿ ಕಾಣುತ್ತಿದ್ದ ಕುಟುಂಬಪ್ರೀತಿಯ ತಣ್ಣೆಳಲನ್ನು ನಾವಿಲ್ಲಿ ಕಾಣುತ್ತಿದ್ದೇವೆ. ಮನುಷ್ಯನ ಹೃದಯವು ಪ್ರೀತಿಗಾಗಿ ಸದಾ ಮಣೆಯುತ್ತದೆ. ಪಾಂಡವರು ಆಶ್ರಮಕ್ಕೆ ಬಂದಾಗ, ಅದನ್ನು ತಿಳಿದ ಧೃತರಾಷ್ಟ್ರ–ಗಾಂಧಾರಿ ಭಾವಪರವಶರಾಗುತ್ತಾರೆ. ಆದರೆ, ನಾವಿಂದು ಭಾವಜಗತ್ತಿಗಿಂತ ವ್ಯವಹಾರ ಜಗತ್ತಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಕಿರಿಯರು ಹಿರಿಯರಿಗೆ ಸಲ್ಲಿಸುವ ಪಾದಾಭಿವಂದನವಾಗಲಿ; ಹಿರಿಯರು ಕಿರಿಯರನ್ನು ಆಲಿಂಗಿಸಿಕೊಂಡು ನೆತ್ತಿಯನ್ನು ಆಘ್ರಾಣಿಸುವುದಾಗಲಿ ನಾವೆಲ್ಲಿ ಕಾಣುತ್ತಿದ್ದೇವೆ? ‘ಕುಟುಂಬ’ ಅಥವ ‘ಪರಿವಾರ’ ಎಂಬ ಪರಿಕಲ್ಪನೆಯು ಭಾವನಾಜಗತ್ತಿನಿಂದ ಕೆಳಕ್ಕೆ ಉರುಳಿಬಿದ್ದಿದೆ. ಅಲ್ಲಿ ಲೆಕ್ಕ–ವ್ಯವಹಾರಗಳ ಜಗತ್ತು ಮಾತ್ರ ತಲೆಯೆತ್ತಿ ಮೆರೆಯುತ್ತಿದೆ.

ಕೌರವಪಾಂಡವರಲ್ಲಿ ಪ್ರೀತಿಸಾಮ್ರಾಜ್ಯ ತಲೆಯೆತ್ತಿ ನಿಂತಿದೆ. ಹಸ್ತಿನಾವತಿಯಿಂದ ಬಂದ ಪ್ರತಿಯೊಬ್ಬರೂ ತಮ್ಮ ಕಷ್ಟಸುಖಗಳನ್ನು ಪರಸ್ಪರ ಹೇಳಿಕೊಳ್ಳುತ್ತ ತಣಿಯುತ್ತಾ ಸಮಾಧಾನ ಪಟ್ಟುಕೊಳ್ಳುತ್ತಿದ್ದಾರೆ. ಆದರೆ, ನಾವಿಲ್ಲಿ ಏಕಾಕಿಗಳಾಗಿ ನಿಂತುಬಿಟ್ಟಿದ್ದೇವೆ. ಇಲ್ಲಿ ಸಮಾಧಾನವೂ ಇಲ್ಲ; ಬಾಂಧವ್ಯದ ತಂತೂ ಇಲ್ಲ. ವ್ಯಾಸರು ‘ಪರಿವಾರ ಪ್ರೀತಿ’ಯನ್ನು ಸಮಯಾವಕಾಶ ದೊರಕಿದಾಗೆಲ್ಲಾ ನಮ್ಮ ಮುಂದೆ ಭಾವಾವಿಷ್ಟರಾಗುತ್ತ ರೂಪಿಸುತ್ತಾರೆ. ಆದರೆ, ನಮ್ಮ ನಮ್ಮ ಕುಟುಂಬ ಜಗತ್ತುಗಳು ಪರಕೀಯತನವನ್ನೂ ಏಕಾಕಿತನವನ್ನೂ ಅನುಭವಿಸುತ್ತ ಪರಿತಾಪ ಪಡುತ್ತಿವೆ. ನಾವೀಗ ಪ್ರೇಮದ ರಸಾವೇಶದಲ್ಲಿ ತಣಿಯಬೇಕಾಗಿದೆ; ಬದುಕಿನ ದರ್ಶನವನ್ನು ನಾವಿಲ್ಲಿ ಕಾಣಬೇಕಾಗಿದೆ. ಆದರೆ, ಇದೆಲ್ಲವೂ ‘ರೆ’ ಪ್ರಪಂಚದಲ್ಲಿಯೇ ಇರುತ್ತದೆಯೆ? ಈ ಪ್ರಶ್ನೆಗೆ ಮುಂದಿನ ಭವಿಷ್ಯತ್‌ಕಾಲ ಉತ್ತರ ಹೇಳಬೇಕಾಗಿದೆ ಅಷ್ಟೆ.

■ ಪುರಂಜೀವಿ

## ಮಾತೇ ಮುತ್ತು

- ‘ಅವರ’ ಹತ್ತಿರ ಇದ್ದ ವಸ್ತು ‘ನನಗೂ ಬೇಕು, ಅವರಿದ್ದಂತೆ ನಾನಾಗಬೇಕು’ ಎಂಬ ಭಾವನೆಯೇ ಅಸೂಯೆ.
  —ಶಾಂತಿನಾಥ ದೇಸಾಯಿ
- ಹಾಳು ಮಾಡಿದ ಒಂದು ಕ್ಷಣ ಮತ್ತೆಂದೂ ಹಿಂದಿರುಗಿ ಬಾರದ ಸಂಪತ್ತು.
  —ಮಹಾತ್ಮಗಾಂಧಿ
- ಮಾನವನ ಅನುಭವದ ಶಕ್ತಿಗೆ ಒಂದು ಮಿತಿಯಿದೆ. ಅನುಭವವನ್ನು ಪಡೆಯುವ ಅವಕಾಶಕ್ಕೂ ಮಿತಿಯಿರುವುದು ಸಾಧ್ಯ.
  —ಎ.ಎನ್. ಮೂರ್ತಿರಾವ್
- ಹಿಸ್ಟರಿ ರಿಪೀಟ್ ಆಗಲಿಕ್ಕೆ ಅದು ನಾಟಕವಲ್ಲ.
  —ದ.ರಾ. ಬೇಂದ್ರೆ
- ಕೊಟ್ಟು ಹೇಳುವ ದಾತ ಅವನು ಹೀನ ಜಾತ.
  —ಕನಕದಾಸ
- ಗ್ರಂಥಗಳಲ್ಲಿ ಕೇವಲ ಎರಡು ವರ್ಗ: ಉತ್ತಮವಾಗಿ ಬರೆದವುಗಳು, ಹೊಲಸಾಗಿ ಬರೆದವುಗಳು.
  —ಆಸ್ಕರ್ ವೈಲ್ಡ್